ಕನ್ನಡ ಸಂಭ್ರಮ

# ಸಾಗರದಾಚೆ ಕನ್ನಡ ಜಾನಪದ

ಶಿವಮೊಗ್ಗ ಜಿಲ್ಲೆ ಸಾಗರದ ಅಪ್ಪಟ ಮಲೆನಾಡಿನಲ್ಲಿ ಹುಟ್ಟಿ ಬೆಳೆದು ಸದ್ಯ ಅಮೆರಿಕದಲ್ಲಿ ಎಂಜಿನಿಯರ್ ಆಗಿರುವ ರಮ್ಯಾ ಮಂಜುನಾಥ್ ವಾಷಿಂಗ್ಟನ್‌ನಲ್ಲಿ ಕನ್ನಡ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ನವೆಂಬರ್ ಕನ್ನಡ ಮಾಸದ ಹಿನ್ನೆಲೆಯಲ್ಲಿ ರಮ್ಯಾ ಅವರು ಸಾಗರದಾಚೆ ತಾವು ನಡೆಸುತ್ತಿರುವ ಕನ್ನಡ ಸೇವೆಯ ಕುರಿತು 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

■ ಸಂದರ್ಶನ: **ಉಮಾ ಅನಂತ್**



◆ **ಅಮೆರಿಕದಲ್ಲಿ ಕನ್ನಡದ ಕಂಪನ್ನು ಪಸರಿಸುವ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಸಕ್ರಿಯರಾಗಿದ್ದೀರಿ. ನಿಮ್ಮ ವೃತ್ತಿ–ಪ್ರವೃತ್ತಿ ಬಗ್ಗೆ ತಿಳಿಸಿ.**

ವೃತ್ತಿಯಲ್ಲಿ ನಾನು ಎಂಜಿನಿಯರ್. ಪ್ರವೃತ್ತಿಯಲ್ಲಿ ಭರತನಾಟ್ಯ ಕಲಾವಿದೆ, ಕನ್ನಡ ಸಂಘಟಕಿ, ನಿರೂಪಕಿ, ಜಾನಪದ ಗಾಯಕಿ, ನೃತ್ಯಗಾರ್ತಿ, ಯಕ್ಷಗಾನಪಟು – ಹೀಗೆ ಹಲವು ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ. ಚಿಕ್ಕವಳಿರುವಾಗಲೇ ಕನ್ನಡದ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡಿದ್ದರಿಂದ ನಮ್ಮ ನೆಲದ ಕನ್ನಡ, ಜಾನಪದ ಸೊಗಡನ್ನು ಸಾಗರದಾಚೆಗೂ ಬಿಂಬಿಸುವ ಕೆಲಸವನ್ನು ಮಾಡುತ್ತಿದ್ದೇನೆ. ಈ ನವೆಂಬರ್ ಮಾಸ ಪೂರ್ತಿ ನಾನು ವಾಷಿಂಗ್ಟನ್‌ನಲ್ಲಿ ಕನ್ನಡ ಕಟ್ಟುವ ಕೆಲಸದಲ್ಲಿ ತುಂಬ ಬ್ಯುಸಿ. ಕನ್ನಡ–ಜಾನಪದ ಎರಡೂ ರಂಗಗಳಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿ, ಭಾರತದಿಂದ ಇಲ್ಲಿಗೆ ಬಂದು ನೆಲೆಸಿದ ಕನ್ನಡ ಮಕ್ಕಳಿಗೆ ನೃತ್ಯ, ಹಾಡು, ಅಭಿನಯ ಮುಂತಾದವುಗಳನ್ನು ಕಲಿಸುವ, ಕಾರ್ಯಕ್ರಮ ಸಂಘಟಿಸುವ ಮೂಲಕ ಕನ್ನಡವನ್ನು ಇಲ್ಲಿ ಜನಪ್ರಿಯಗೊಳಿಸುತ್ತಿದ್ದೇನೆ.

◆ **ಅಮೆರಿಕದಲ್ಲಿ ಕನ್ನಡ ಚಟುವಟಿಕೆ ಆರಂಭಿಸಲು ಪ್ರೇರಣೆ ಏನು?**

ನಾವು 2016ರಲ್ಲಿ ವೃತ್ತಿ ನಿಮಿತ್ತ ಅಮೆರಿಕಕ್ಕೆ ಹೋಗಬೇಕಾಯಿತು. 30 ವರ್ಷಗಳಿಂದ ಕನ್ನಡ ನೆಲದಲ್ಲಿ ನೆಲೆನಿಂತಿದ್ದ ನಾವು ಹೊಸ ದೇಶ, ಹೊಸ ಜಾಗಕ್ಕೆ ಹೋಗುವುದೆಂದರೆ ಸಹಜವಾಗಿಯೇ ಕುತೂಹಲ, ಪುಳಕವಿತ್ತು. ಅಮೆರಿಕದ ವಾಷಿಂಗ್ಟನ್‌ನಲ್ಲಿ ಕನ್ನಡ ಜನರು ಬಹಳಷ್ಟು ಜನ ಇರುವುದರಿಂದ ಅವರಿಗೆ ಕನ್ನಡದ ಬಗ್ಗೆ ಹೆಚ್ಚು ಅಭಿಮಾನ, ಆಸಕ್ತಿ. ಆ ಪ್ರೇಮವೇ ಕನ್ನಡ ಕಟ್ಟುವ ಕೆಲಸ ಮಾಡಲು ಪ್ರೇರೇಪಣೆಯಾಯಿತು. ವಾಷಿಂಗ್ಟನ್‌ನಲ್ಲಿ ಇರುವ ಕನ್ನಡ ಸಮುದಾಯ ಕನ್ನಡ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲ. ಇದರೊಂದಿಗೆ ಅನನ್ಯ ನಂಟು ಇಟ್ಟುಕೊಂಡಿರುವ ನಾನು ಕನ್ನಡ ಉಳಿಸಿ ಬೆಳೆಸುವ ಸಮುದಾಯದ ಕೆಲಸಗಳಲ್ಲಿ ಸಕ್ರಿಯಳಾಗಿದ್ದೇನೆ. ಕನ್ನಡ ಭಾಷೆಯಲ್ಲಿ ಹಿಡಿತ ಹಾಗೂ ಮಾತಿನಲ್ಲಿ ನಿರರ್ಗಳ ಚಾಕಚಕ್ಯತೆ ಇರುವುದರಿಂದ ಕನ್ನಡದ ಬಗ್ಗೆ ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡಲು ಸಾಧ್ಯವಾಗಿದೆ. ಇಲ್ಲಿ ಕನ್ನಡ ಕಂಪನ್ನು ಪಸರಿಸುತ್ತಿರುವ ಡಾ. ಬಿ.ಎಂ. ಹೆಗ್ಡೆ, ಪಟ್ಲ ಸತೀಶ್ ಶೆಟ್ಟಿ ಅವರೊಡಗೂಡಿ ಕನ್ನಡ ಕೆಲಸಗಳನ್ನು ಮಾಡುತ್ತಿದ್ದೇನೆ. 'ಅಕ್ಕ ಕನ್ನಡ ಸಮ್ಮೇಳನ' (2018)ದಲ್ಲಿ ನಿರೂಪಕಿಯಾಗಿಯೂ ಕಾರ್ಯನಿರ್ವಹಿಸಿದ್ದೆ.

* **ಕನ್ನಡದ ಜೊತೆಗೆ ಜಾನಪದವನ್ನೂ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ಹಾಕಿಕೊಂಡಿದ್ದೇನೆ ಎಂದಿರಿ. ಅವು ಯಾವುವು?**

ಜನಪದ ಗೀತೆಗಳನ್ನು, ಜಾನಪದಕ್ಕೆ ಸಂಬಂಧಿಸಿದ ಜ್ಞಾನವನ್ನು ಇಲ್ಲಿನ ಮಕ್ಕಳಿಗೆ ಕಲಿಸುವ ಪ್ರಯತ್ನ ಮಾಡುತ್ತಿದ್ದೇನೆ. ವಾಷಿಂಗ್ಟನ್‌ನಲ್ಲಿ ಮಕ್ಕಳಿಗೆ ಕನ್ನಡ ನೃತ್ಯ, ಹಾಡು, ಜಾನಪದ ನೃತ್ಯವನ್ನು ಹೇಳಿಕೊಡುವುದು, ಇಲ್ಲಿನ 'ಕನ್ನಡ ಭಾರತಿ' ಎಂಬ ಲಾಭರಹಿತ ಸಂಸ್ಥೆ ಜೊತೆಗೆ ಸೇರಿ ಕನ್ನಡ ಮಾಸದುದ್ದಕ್ಕೂ ಅನೇಕ ಕಾರ್ಯಕ್ರಮ ನಡೆಸುವ ನಿರ್ಧಾರ ಕೈಗೊಂಡಿದ್ದೇನೆ.

ತೆಂಕುತಿಟ್ಟು ಯಕ್ಷಗಾನದ ಹೆಸರಾಂತ ಕಲಾವಿದ